# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 197 | Pages. 2 | Date: 16-07-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 197 – ಪುಟಗಳು : 2 | 16-07-2026 ಗುರುವಾರ | Ph: 8762954248 | ದರ : ₹1


# ರಸ್ತೆ ಅಪಘಾತ ತಡೆಗೆ ಕಟ್ಟುನಿಟ್ಟಿನ ಸೂಚನೆ

## ಬ್ಲಾಕ್ ಸ್ಪಾಟ್ ಗುರುತಿಸಿ ವರದಿ ನೀಡಿ | ಜಿಲ್ಲಾಧಿಕಾರಿ ಲತಾಕುಮಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ರಸ್ತೆ ಅಪಘಾತಗಳು ಹೆಚ್ಚು ಸಂಭವಿಸುತ್ತಿದ್ದು, ಅಪಘಾತದಿಂದ ಮರಣ ಹೊಂದುವುದನ್ನು ತಡೆಗಟ್ಟಲು ಸುರಕ್ಷತಾ ಕ್ರಮ ಕೈಗೊಳ್ಳಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಸಿ ಮಾತನಾಡಿದ ಅವರು, ಅಪಘಾತಗಳ ತಡೆಗೆ ಕ್ರಿಯಾ ಯೋಜನೆ ತಯಾರಿಸಿ ಎಂದು ಸೂಚಿಸಿದರಲ್ಲದೆ, ಸಾವಿನ ಪ್ರಮಾಣ ಕಡಿಮೆ ಮಾಡಲು ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಅಪಘಾತಗಳು ಸಂಭವಿಸುತ್ತಿರುವ ಬ್ಲಾಕ್ ಸ್ಪಾಟ್ ಗುರುತಿಸಿ ಯಾವ ಕಾರಣಕ್ಕೆ ಅಪಘಾತ ಸಂಭವಿಸುತ್ತಿವೆ ಎಂಬುದನ್ನು ಪರಿಗಣಿಸಿ, ತಡೆಗಟ್ಟಲು ಏನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಹಾಗೂ ಅಪಘಾತಗಳಿಂದ



ಸಂಭವಿಸಿರುವ ಮರಣಗಳ ಅಡಿಟ್ ಆಗಬೇಕು. ಈ ನಿಟ್ಟಿನಲ್ಲಿ ಒಂದು ತಿಂಗಳೊಳಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ರಸ್ತೆ ಸುರಕ್ಷತೆಗೆ ಸಹಾಯವಾಣಿ ತೆರೆಯಬೇಕು. ಮೋಟಾರು ವಾಹನಕ್ಕೆ ಸಂಬಂಧಿಸಿ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಸ್ತೆ ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಿ ತಕ್ಷಣ ಸ್ಪಂದಿಸಿ 15 ನಿಮಿಷದಲ್ಲಿ ಸ್ಥಳಕ್ಕೆ ಅಂಬುಲೆನ್ಸ್ ಹೋಗಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ನಿಗಾ ವಹಿಸಬೇಕು. ಅಪಘಾತಗಳಿಂದ ಸಾವು ಸಂಭವಿಸುವುದನ್ನು ತಡೆಗಟ್ಟಲು ವಾಹನ ಚಾಲನೆ ಮಾಡುವಾಗ ಸುರಕ್ಷತೆಗಾಗಿ ಕಡ್ಡಾಯವಾಗಿ ಸೀಟ್ ಬೆಲ್ಟ್ ಹಾಗೂ ಹೆಲ್ಮೆಟ್ ಧರಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಮಟ್ಟದಲ್ಲಿ ಸಹ ಸಮಿತಿ ರಚನೆ ಮಾಡಿ ಪ್ರತಿವಾರ ಸಭೆ ನಡೆಸಿ ರಸ್ತೆ ಸುರಕ್ಷತೆಗೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಹೆಚ್.ಕೆ.ಕೃಷ್ಣಮೂರ್ತಿ ಮಾತನಾಡಿ, ರಸ್ತೆ ಗುಂಡಿಗಳನ್ನು ಮುಚ್ಚಲು ಮುಂಜಾಗ್ರತೆ ವಹಿಸಿ ಕ್ರಮ ಕೈಗೊಳ್ಳಬೇಕು. ಕೆಎಸ್ಆರ್‌ಟಿಸಿ ಬಸ್ ಚಾಲಕರು ವಾಹನವನ್ನು ಶಿಸ್ತು ಬದ್ಧವಾಗಿ ಚಾಲನೆ ಮಾಡುವಂತೆ ತಿಳಿವಳಿಕೆ ನೀಡಲು ಹೇಳಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಯುತ್ತಿರುವ ಫ್ಲೇಓವರ್ ಕಾಮಗಾರಿ ಕೆಲಸವನ್ನು ಶೀಘ್ರವಾಗಿ ಪೂರ್ಣಗೊಳಿಸುವುದರ ಜೊತೆಗೆ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

### ದಿಶಾ ಸಭೆ ಮುಂದೂಡಿಕೆ

ಹಾಸನ: ಸಂಸದ ಶ್ರೇಯಸ್ ಪಟೇಲ್ ಅಧ್ಯಕ್ಷತೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ (ದಿಶಾ) ಸಭೆಯನ್ನು ಮುಂದೂಡಲಾಗಿದೆ.

ಜು.16ರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಸಭೆ ನಿಗದಿಪಡಿಸಲಾಗಿತ್ತು. ಅನಿವಾರ್ಯ ಕಾರಣದಿಂದ ಸಭೆ ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶುಭಂ ಶುಕ್ಲಾ ತಿಳಿಸಿದ್ದಾರೆ.

## ಬೀದಿ ಬದಿ ವ್ಯಾಪಾರಿಗಳಿಗೆ ಅಭಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ನಗರದ ವಾರದ ಸಂಜೆ ವ್ಯಾಪಾರಿಗಳು ಹಾಗೂ ಬೀದಿಬದಿ ವ್ಯಾಪಾರಿಗಳಿಗೆ ತೊಂದರೆ ಕೊಡದಂತೆ ಹಾಸನ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸ್ವರೂಪ್ ಸೂಚಿಸಿದರು.

ಪಾಲಿಕೆ ಎದುರು ಪ್ರತಿಭಟನೆ ನಡೆಸುತ್ತಿದ್ದವರ ಮನವಿ ಆಲಿಸಿ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳು ಹಾಗೂ ಪಾಲಿಕೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿ ಸೂಕ್ತ ತೀರ್ಮಾನ ಮಾಡಲಾಗುವುದು.ಅಲ್ಲಿವರೆಗೂ ನಗರದ ಯಾವುದೇ ವ್ಯಾಪಾರಿಗಳಿಗೆ ತೊಂದರೆ ಕೊಡಬಾರದು ಎಂದರು.

ನಗರದಲ್ಲಿ ತುಂಬಾ ವರ್ಷಗಳಿಂದ ನಡೆದುಕೊಂಡು ಬಂದಿರುವ ಮಂಗಳವಾರದ ಸಂತೆ ವ್ಯಾಪಾರಿಗಳಿಗೆ ಪಾಲಿಕೆ ಅಧಿಕಾರಿಗಳು ವ್ಯಾಪಾರ ನಡೆಸದಂತೆ ತಾಕೀತು ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಯಾರು ಏನೇ ಹೇಳಿದರೂ ವ್ಯಾಪಾರಿಗಳು ಭಯ ಪಡುವ ಅಗತ್ಯವಿಲ್ಲ. ಯಾವುದೇ ಕ್ರಮ ಹಾಗೂ ತೀರ್ಮಾನ ಮಾಡುವವರೆಗೂ ಅದೇ ಸ್ಥಳದಲ್ಲಿ ಸಂತೆ ನಡೆಸುವಂತೆ ಅನುವು ಮಾಡಿಕೊಡಲು ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚಿಸಿದರು. ತಾವು ಯಾವತ್ತೂ ಬೀದಿ ಬದಿ ವ್ಯಾಪಾರಿಗಳ ಪರ ಎಂದು ಧೈರ್ಯ ಹೇಳಿದರು. ನಂತರ ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ವಿತರಿಸಲು ತುಂಬಾ ತಡವಾಗುತ್ತಿರುವ ಕಾರಣ ಸಾಲಿನಲ್ಲಿ ನಿಂತಿದ್ದ ಸಾರ್ವಜನಿಕರೊಂದಿಗೆ ಮಾಹಿತಿ ಪಡೆದು ಪ್ರಮಾಣ ನೀಡಲು ವಿಳಂಬ ಮಾಡಬೇಡಿ ಎಂದರು.

# ಅವಸರದ ಉದ್ಘಾಟನೆಯೇ ಪೈಪ್‌ಲೈನ್ ಅವಘಡಕ್ಕೆ ಕಾರಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಾಜಕೀಯ ಕಾರಣಕ್ಕಾಗಿ ಅಪೂರ್ಣ ಕಾಮಗಾರಿಯ ನಡುವೆ ಎತ್ತಿನಹೊಳೆ ನೀರನ್ನು ಹರಿಸಿದ್ದರಿಂದ ಪೈಪ್‌ಲೈನ್ ಸ್ಫೋಟಗೊಂಡು ಪದೇ ಪದೇ ತೊಂದರೆಯಾಗುತ್ತಿದೆ ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಆರೋಪಿಸಿದರು.

ತಾಲ್ಲೂಕಿನ ಹಲಸುಲಿಗೆ ಗ್ರಾಮದಲ್ಲಿ ಇತ್ತೀಚೆಗೆ ಪೈಪ್‌ಲೈನ್ ಸ್ಫೋಟಗೊಂಡ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಯೋಜನೆ ಪೂರ್ಣಗೊಳ್ಳುವ ಮುನ್ನವೇ ರಾಜಕೀಯ ಕಾರಣಕ್ಕಾಗಿ ಅವಸರದಲ್ಲಿ ಉದ್ಘಾಟನೆ ನಡೆಸಿದ್ದೇ ಇಂತಹ ಅವಘಡಗಳಿಗೆ ಕಾರಣವಾಗಿದೆ ಎಂದು ಟೀಕಿಸಿದರು.

ಈ ಯೋಜನೆಯಲ್ಲಿ ಇದು ನಾಲ್ಕನೇ ಬಾರಿ ಪೈಪ್‌ಲೈನ್ ಒಡೆದಿರುವುದು ಇಲಾಖೆಯ ನಿರ್ಲಕ್ಷ್ಯ ಮತ್ತು ಕಳಪೆ ಕಾಮಗಾರಿಗೆ ಸಾಕ್ಷಿಯಾಗಿದೆ. ಇತ್ತೀಚಿನ ಘಟನೆಯಿಂದ ರೈತರ ಬೆಳೆಗಳಿಗೆ ಹಾನಿಯಾಗಿದ್ದು, ಯೋಜನೆಯ ಗುಣಮಟ್ಟದ ಬಗ್ಗೆ ಗಂಭೀರ ಅನುಮಾನಗಳು ಮೂಡಿವೆ ಎಂದರು. ಯೋಜನೆಯ ಪ್ರಮುಖ ಕಾಮಗಾರಿಗಳಾದ ಕೋಲಾರ ಹಾಗು ಬೈರುಗೊಂಡ್ಲ ಭಾಗಗಳ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಆದರೂ ನೀರು ಹರಿಸಲು ಮುಂದಾದ ಪರಿಣಾಮ ಪೈಪ್‌ಗಳ ಮೇಲೆ ಅಧಿಕ ಒತ್ತಡ ಬಿದ್ದು ಸ್ಫೋಟ ಸಂಭವಿಸಿದೆ. ಸಮರ್ಪಕ ತಾಂತ್ರಿಕ ವಿನ್ಯಾಸ ಮತ್ತು ಗುಣಮಟ್ಟದ ಕಾಮಗಾರಿ ನಡೆದಿದ್ದರೆ ಇಂತಹ ಘಟನೆ ಸಂಭವಿಸುತ್ತಿರಲಿಲ್ಲ ಎಂದು ಆರೋಪಿಸಿದರು.

ಘಟನೆಯಿಂದ ಸುಮಾರು 8 ಕೋಟಿ ಲೀಟರ್ ನೀರು ಪೋಲಾಗಿದೆ ಎಂದು ಅಂದಾಜಿಸಲಾಗಿದ್ದು, ಸರ್ಕಾರವೇ ಸಂಪೂರ್ಣ ಹೊಣೆ ಹೊರಬೇಕು. ಏಪ್ರಿಲ್‌ನಿಂದ ಜೂನ್ ವರೆಗೆ ಅನಾವೃಷ್ಟಿ ಹಾಗು ಕಳೆದ ವಾರದ ಅತಿವೃಷ್ಟಿಯಿಂದ ರೈತರು ಈಗಾಗಲೇ ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಅಮೂಲ್ಯ ನೀರು ಪೋಲಾಗಿರುವುದು ದುರದೃಷ್ಟಕರ ಎಂದು ಹೇಳಿದರು.

ಪೈಪ್‌ಲೈನ್ ಸ್ಫೋಟದಿಂದ ಬೆಳೆ ಹಾನಿಗೊಳಗಾದ ರೈತರಿಗೆ ತಕ್ಷಣ ಸೂಕ್ತ ಪರಿಹಾರ ನೀಡಬೇಕು. ಜೊತೆಗೆ ಯೋಜನೆಯ ಸಂಪೂರ್ಣ ಕಾಮಗಾರಿಯನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸಿ ಇಂತಹ ಅವಘಡಗಳು ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

## ಬೇಲೂರು ರೋಟರಿ ಕ್ಲಬ್ ಅಧ್ಯಕ್ಷರಾಗಿ ಶಿವರಾಜು ಪದಗ್ರಹಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ರೋಟರಿ ಅಧ್ಯಕ್ಷ ಸ್ಥಾನವು ಅಧಿಕಾರದ ಸಂಕೇತವಲ್ಲ, ಸಮಾಜ ಸೇವೆಯ ಜವಾಬ್ದಾರಿಯ ಪ್ರತೀಕವಾಗಿದೆ ಎಂದು ರೋಟರಿ ಕ್ಲಬ್‌ನ ಟಿಬಿ ಜಾಗೃತಿ ಮತ್ತು ತಡೆಗಟ್ಟುವಿಕೆ ಸಮಿತಿಯ ಅಧ್ಯಕ್ಷೆ ಡಾ. ಬಿ.ಎಸ್. ಪ್ರೀತಿ ಮೋಹನ್ ಹೇಳಿದರು.

ಪಟ್ಟಣದ ವಿಆರ್ ಕನ್ವೆನ್ಷನ್ ಸಭಾಂಗಣದಲ್ಲಿ ನಡೆದ ರೋಟರಿ ಕ್ಲಬ್ ಬೇಲೂರಿನ 2026-27ನೇ ಸಾಲಿನ ಪದಗ್ರಹಣ ಸಮಾರಂಭದಲ್ಲಿ ನೂತನ ಅಧ್ಯಕ್ಷರಾಗಿ ಬಿ.ಬಿ. ಶಿವರಾಜು ಹಾಗೂ ಕಾರ್ಯದರ್ಶಿಯಾಗಿ ರಾಘವೇಂದ್ರ ಅವರಿಗೆ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿ, ವಿಶ್ವವನ್ನು ಪೋಲಿಯೋ ಮುಕ್ತಗೊಳಿಸುವ ಅಭಿಯಾನದಲ್ಲಿ ರೋಟರಿ ಸಂಸ್ಥೆಯ ಕೊಡುಗೆ ಐತಿಹಾಸಿಕವಾಗಿದ್ದು, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಹಾಗೂ ಮಾನವೀಯ ಸೇವೆಗಳ ಮೂಲಕ ಸಮಾಜದ ದುರ್ಬಲ ವರ್ಗಗಳ ಬದುಕಿನಲ್ಲಿ ರೋಟರಿ ಸಂಸ್ಥೆ ಆಶಾಕಿರಣ ಮೂಡಿಸುತ್ತಿದೆ ಎಂದರು.



ರೋಟರಿ ಜಿಲ್ಲಾ ಸಹಾಯಕ ಗವರ್ನರ್ ಡಾ. ಎಸ್. ಗಣೇಶ್ ಮಾತನಾಡಿ, ರೋಟರಿ ಸದಸ್ಯರು ತಮ್ಮ ಸಮಯ, ಶ್ರಮ ಮತ್ತು ಸಂಪನ್ಮೂಲಗಳನ್ನು ಸಮಾಜಸೇವೆಗೆ ಮೀಸಲಿಡುವ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ, ಶಿಕ್ಷಣ, ಪರಿಸರ ಮತ್ತು ಯುವಜನ ಸೇವಾ ಕಾರ್ಯಕ್ರಮಗಳನ್ನು ಮತ್ತಷ್ಟು ವಿಸ್ತರಿಸುವ ಮೂಲಕ ಬೇಲೂರು ರೋಟರಿ ಕ್ಲಬ್ ಮಾದರಿ ಸಂಸ್ಥೆಯಾಗಿ ಬೆಳೆಯಲಿ ಎಂದು ಆಶಿಸಿದರು.

## ಎನ್ಯೂಮರೇಷನ್ ನಮೂನೆ ಭರ್ತಿಗೆ ಮನವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ(ಎಸ್ ಐಆರ್) ನಡೆಯುತ್ತಿದ್ದು ಮತದಾರರು ಬಿಎಲ್‌ಒಗಳು ನೀಡುವ ಎನ್ಯೂಮರೇಷನ್ ಫಾರಂಗಳನ್ನು ಕೂಡಲೇ ಭರ್ತಿ ಮಾಡಿ ವಾಪಸ್ ನೀಡುವಂತೆ ಕಾಂಗ್ರೆಸ್ ಜಿಲ್ಲಾ ವಕ್ತಾರ ಮಂಜುನಾಥ್ ಶರ್ಮಾ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಚುನಾವಣಾ ಆಯೋಗದ ನಿರ್ದೇಶನದಂತೆ ಜೂ.30 ರಿಂದ ಜು.29 ತವರೆಗೆ ಜಿಲ್ಲೆಯಲ್ಲೂ ಸರ್ ಪ್ರಕ್ರಿಯೆ ಶುರುವಾಗಿ ಈಗಾಗಲೇ 15 ದಿನ ಕಳೆದಿದೆ.

ಈಗಾಗಲೇ 90 ಭಾಗ ಗಣತಿ ನಮೂನೆ ವಿತರಿಸಲಾಗಿದೆ. ಅರ್ಜಿ ಪಡೆದವರು ಫಾರಂ ತುಂಬಿ ವಾಪಸ್ ಕೊಡಬೇಕು. ಒಂದು ವೇಳೆ ಅರ್ಜಿ ಭರ್ತಿ ಮಾಡಲು ಗೊಂದಲ ಎದುರಾದರೆ, ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ವಾರ್ ರೂಂ. ತೆರೆಯಲಾಗಿದ್ದು, ಅಲ್ಲಿಗೆ ಭೇಟಿ ನೀಡಿ ಮಾಹಿತಿ ಪಡೆಯುವಂತೆ ಕೋರಿದರು. ಇಲ್ಲಿಗೆ ಬಂದರೆ ಸಮಗ್ರ ಮಾಹಿತಿ ಸಿಗಲಿದೆ ಎಂದರು. ಭರ್ತಿ ಮಾಡಿದ ಅರ್ಜಿಗಳ ಪೈಕಿ ಒಂದನ್ನು ನೀವಿಟ್ಟುಕೊಂಡು ಮತ್ತೊಂದನ್ನು ಬಿಎಲ್‌ಒಗಳಿಗೆ ನೀಡಿ. ಕೆಲವೇ ದಿನಗಳು ಬಾಕಿ ಇದ್ದು ಕೂಡಲೇ ಅರ್ಜಿ ತುಂಬುವ ಪ್ರಕ್ರಿಯೆ ಮಗಿಸಿ ಎಂದು ವಿನಂತಿಸಿದರು.

ಒಂದು ವೇಳೆ ನೀವು ಅರ್ಜಿ ಕೊಡದಿದ್ದರೆ, ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇರುವುದಿಲ್ಲ. ಅದಕ್ಕೆ ನೀವೇ ಜವಾಬ್ದಾರರು ಎಂದು ಎಚ್ಚರಿಸಿದರು.

ಜಿಲ್ಲಾ ಕಾರ್ಯಾಧ್ಯಕ್ಷ ಜಿ.ಬಿ.ಶಶಿಧರ್ ಮಾತನಾಡಿ, ಸರ್ ಸಂಬಂಧ ಭಾರಿ ಪ್ರಮಾಣದ ಪ್ರಚಾರ ಆಗಿದೆ. ಡಿಜಿಟಲೀಕರಣ ಅರ್ಧ ಆಗಿದೆ, ಜನರು ನಿರ್ಲಕ್ಷ್ಯ ಮಾಡುವುದು ಬೇಡ. ಕೇವಲ 10 ದಿನ ಬಾಕಿ ಇದೆ, ಜಿಲ್ಲೆಯ ಎಲ್ಲ ಜನರು ಮತ ಪಟ್ಟಿಗೆ ತಮ್ಮ ಸೇರಿಸಲು ಮುಂದಾಗಬೇಕು ಎಂದು ಕರೆ ನೀಡಿದರು. ಎನ್ಯುಮರೇಷನ್ ಫಾರಂ ವಾಪಸ್ ಕೊಡದೇ ಇದ್ದರೆ ನೀವು ಮತದಾರರಾಗುವುದಿಲ್ಲ. ಹಾಗಾಗಿ ನಿರ್ಲಕ್ಷ್ಯ ಮಾಡಬೇಡಿ ಎಂದು ಮನವಿ ಮಾಡಿದರು.

ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಮಂಗಳಾಪುರ ನಾಗರಾಜ್ ಮಾತನಾಡಿ, ಜಿಲ್ಲಾಧ್ಯಕ್ಷರ ಬದಲಾವಣೆ ಸಂಬಂಧ ನೂತನ ಕೆಪಿಸಿಸಿ ಅಧ್ಯಕ್ಷರು ಉಸ್ತುವಾರಿ ನೇಮಕ ಮಾಡಿದ್ದಾರೆ ಎಂಬ ಸುದ್ದಿ ಇದೆ. ಆದರೆ ಈವರೆಗೆ ಜಿಲ್ಲೆಗೆ ಯಾರೂ ಬಂದಿಲ್ಲ. ಬಂದ ಬಳಿಕ ಚರ್ಚಿಸಲಾಗುವುದು. ನೂತನ ಕೆಪಿಸಿಸಿ ಅಧ್ಯಕ್ಷರು ಪಕ್ಷ ಬಲವರ್ಧನೆಗಾಗಿ ಹಲವು ಕ್ರಮ ಕೈಗೊಳ್ಳುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಇಂಟೆಕ್ ಜಿಲ್ಲಾಧ್ಯಕ್ಷ ರಾಮಚಂದ್ರ ಇದ್ದರು.

# ಬರಪೀಡಿತ ಜಿಲ್ಲೆ ಪಟ್ಟಿಗೆ ಹಾಸನ ಸೇರಿಸಿ

## ರಾಜ್ಯ ಸರ್ಕಾರಕ್ಕೆ ಶಾಸಕ ಹೆಚ್.ಪಿ.ಸ್ವರೂಪ್ ಆಗ್ರಹ | ಹಾನಿಗೀಡಾದ ಜೋಳ ಬೆಳೆ ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಈ ಬಾರಿ ಮಳೆಗಾಲ ಕಡಿಮೆ ಆಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಬರ ಪೀಡಿತ ಎಂದು ಘೋಷಿಸಬೇಕು. ಹಾಸನ ತಾಲೂಕಿನಲ್ಲಿ ಬಿಳಿಸುಳಿ ರೋಗದ ಹಾವಳಿಯಿಂದ ಮೆಕ್ಕೆಜೋಳ ಬಹುತೇಕ ಹಾಳಾಗಿದ್ದು, ಎಸ್‌ಡಿಆರ್‌ಎಫ್ ಮಾನದಂಡ ದಡಿ ರಾಜ್ಯ ಸರ್ಕಾರ ವಿಶೇಷ ಪರಿಹಾರ ನೀಡಬೇಕು ಎಂದು ಶಾಸಕ ಹೆಚ್.ಪಿ.ಸ್ವರೂಪ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಮೆಕ್ಕೆಜೋಳ ಉತ್ಪಾದನಾ ಜಿಲ್ಲೆಗಳಲ್ಲಿ ಹಾಸನವೂ ಒಂದಾಗಿದೆ. ಸಾವಿರಾರು ರೈತರು ಜೀವನೋಪಾಯಕ್ಕಾಗಿ ಮುಸುಕಿನ ಜೋಳ ಬೆಳೆಯುತ್ತಾರೆ. ಅಂತೆಯೇ ಪ್ರಸಕ್ತ ಹಂಗಾಮಿನಲ್ಲಿ ತಾಲೂಕಿನಲ್ಲಿ 35 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯುವ ಗುರಿಯಲ್ಲಿ 24,650 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ.

ಆದರೆ ಬಿಳಿಸುಳಿ ರೋಗ ವ್ಯಾಪಕವಾಗಿ ಹರಡಿರುವುದರಿಂದ ಕೃಷಿ ಇಲಾಖೆ ಕ್ಷೇತ್ರ ಸಮೀಕ್ಷೆ ಪ್ರಕಾರವೇ 17,200 ಹೆಕ್ಟೇರ್ ಪ್ರದೇಶದ ಬೆಳೆ ರೋಗದಿಂದ ನಾಶವಾಗಿದೆ, ಅಂದರೆ



ಶೇ.60-70 ರಷ್ಟು ಬೆಳೆ ಹಾಳಾಗಿದೆ ಎಂದು ಮಾಹಿತಿ ನೀಡಿದರು.

ಇದರಿಂದ ರೈತರು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಕೃಷಿ ಆರ್ಥಿಕತೆ ಹಾಗೂ ಜೋಳ ಆಧಾರಿತ ಪಶು ಆಹಾರ ಸರಪಳಿಯ ಮೇಲೂ ದುಷ್ಪರಿಣಾಮ ಬೀಳಲಿದೆ. ಹಾಗಾಗಿ ಹಾಸನ ಜಿಲ್ಲೆಯನ್ನು ಬೂಜಿರೋಗ ಬಾಧಿತ ಜಿಲ್ಲೆಯೆಂದು ಘೋಷಿಸಿ ವಿಶೇಷ ಪ್ರಕರಣ ಎಂದು ಪರಿಗಣಿಸಿ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

ಹಾಗೆಯೇ ಕೇಂದ್ರದಿಂದ ಎನ್‌ಡಿಆರ್‌ಎಫ್ ಅಡಿ ನೆರವು ಪಡೆಯಲು ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಬೇಕು. ಬಿಳಿಸುಳಿ ರೋಗವನ್ನು ವಿಮೆ ವ್ಯಾಪ್ತಿಗೆ ಸೇರಿಸಲು ಸಾಧ್ಯವಿಲ್ಲದ ಕಾರಣ, ವಿಶೇಷ ಪ್ರಕರಣ ಎಂದು ಪರಿಗಣಿಸಿ ಹಾಸನ ಜಿಲ್ಲೆಗೆ ವಿಶೇಷ ಆರ್ಥಿಕ ಪರಿಹಾರ ಪ್ಯಾಕೇಜ್ ಘೋಷಿಸಿ ಪರಿಹಾರವನ್ನು ಕಾಲಮಿತಿಯೊಳಗೆ ರೈತರ ಖಾತೆಗೆ ಜಮೆ ಮಾಡಬೇಕು ಎಂದು ಮನವಿ ಮಾಡಿದರು.

ಮತ್ತೊಂದೆಡೆ ತಾಲೂಕಿನಲ್ಲಿ 305 ಮಿ.ಮೀ. ವಾಡಿಕೆ ಮಳೆಗೆ 204 ಮಿ.ಮೀ ಮಳೆಯಾಗಿ ಶೇ.33-35 ರಷ್ಟು ಕೊರತೆ ಆಗಿದೆ. ಕಳೆದ 10 ವರ್ಷಗಳಲ್ಲೇ ಇದು ಕಡಿಮೆ ಮಳೆಯಾಗಿದೆ. ಒಟ್ಟಾರೆ ನಷ್ಟಕ್ಕೆ ರಾಜ್ಯ ಸರ್ಕಾರ ಕೂಡಲೇ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.ಈ ಸಂಬಂಧ ಅಧಿವೇಶನದಲ್ಲೂ ಚರ್ಚೆ ಮಾಡಲಾಗುವುದು ಎಂದು ತಿಳಿಸಿದರು.

ಶಂಕುಸ್ಥಾಪನೆ: ಇದಕ್ಕೂ ಮುನ್ನ ನಗರದ ಮದರ್ ತೆರೇಸಾ ರಸ್ತೆಯಲ್ಲಿ ಸುಮಾರು 45 ಲಕ್ಷ ರೂ. ಮಹಾನಗರ ಪಾಲಿಕೆ ಅನುದಾನದಲ್ಲಿ ಟಾರ್ ರಸ್ತೆ ಹಾಗೂ ಅಲ್ಲಿನ ಪಕ್ಕದಲ್ಲಿ ಕಾಂಕ್ರಿಟ್ ರಸ್ತೆ ಹಾಗೂ ಡ್ರೈನೇಜ್ ಕಾಮಗಾರಿಗಳಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಕಳೆದ ಹಲವು ದಿನಗಳಿಂದ ರಸ್ತೆ ಹಾಗೂ ಚರಂಡಿ ಸಮಸ್ಯೆಯಿಂದ ಬಳಲುತ್ತಿರುವ ಬಗ್ಗೆ ಅಲ್ಲಿನ ನಿವಾಸಿಗಳಿಂದ ದೂರು ಬಂದ ಹಿನ್ನೆಲೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಅತಿ ಶೀಘ್ರದಲ್ಲಿ ಕಾಮಗಾರಿ ಮುಗಿಸಿ ಸಾರ್ವಜನಿಕರ ಅನುಕೂಲಕ್ಕೆ ಬಿಟ್ಟುಕೊಡುವಂತೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಕಾರ್ಯಕರ್ತರು ಇದ್ದರು. ಸಾಲಗಾಮೆ ಹೋಬಳಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಶಾಸಕರು ಮುಸುಕಿನ ಜೋಳ ಬೆಳೆಯ ಪರಿಸ್ಥಿತಿ ಪರಿಶೀಲಿಸಿದರು.

> ಜಿಲ್ಲೆಯಲ್ಲಿ ಹಿಂದೆ 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದ ಆಲೂಗಡ್ಡೆ ಬೆಳೆ ಈಗ 4 ಸಾವಿರ ಹೆಕ್ಟೇರ್‌ಗೆ ಸೀಮಿತ ಆಗಿದೆ. ಮೆಕ್ಕೆಜೋಳವೂ ಬಿಳಿಸುಳಿ ಬಲೆಗೆ ಸಿಲುಗಿದೆ. ಈ ಜೋಳವನ್ನು ಜಾನುವಾರುಗಳಿಗೆ ಕೊಡಬಾರದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರಿಹಾರ ಕೋರಿ ಶೀಘ್ರವೇ ಸಿಎಂ ಬಳಿಗೆ ನಿಯೋಗ ತೆರಳಲಾಗುವುದು.
>
> **– ಹೆಚ್.ಪಿ.ಸ್ವರೂಪ್, ಶಾಸಕ**

# ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿಶೇಷ ಚೇತನರು ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗುವ ಉದ್ದೇಶದಿಂದ ತಾಲೂಕು ಪಂಚಾಯಿತಿ 2025-26ನೇ ಸಾಲಿನ ಅನುದಾನದಡಿ ಏಳು ತ್ರಿಚಕ್ರ ವಾಹನಗಳನ್ನು ವಿತರಿಸಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ನಡೆದ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಾಹನ ಹಸ್ತಾಂತರಿಸಿ ಮಾತನಾಡಿದ ಅವರು, ಸಕಲೇಶಪುರ ತಾಲೂಕು ವಿಸ್ತೀರ್ಣದಲ್ಲಿ ದೊಡ್ಡದಾಗಿದ್ದು, ಗ್ರಾಮೀಣ ಭಾಗದ ವಿಶೇಷ ಚೇತನರಿಗೆ ದೈನಂದಿನ ಸಂಚಾರ ದೊಡ್ಡ ಸವಾಲಾಗಿದೆ. ಅನೇಕ ಗ್ರಾಮಗಳಿಗೆ ಸಮರ್ಪಕ ಬಸ್ ಸೌಲಭ್ಯವೂ ಇಲ್ಲ. ಈ ಹಿನ್ನೆಲೆಯಲ್ಲಿ ಅವರು ಸಹ ಸಮಾಜದ ಮುಖ್ಯವಾಹಿನಿಯಲ್ಲಿ ಸ್ವಾವಲಂಬಿಯಾಗಿ ಬದುಕಲು ಅನುಕೂಲವಾಗುವಂತೆ ಸುಮಾರು 9.77 ಲಕ್ಷ ರೂ. ವೆಚ್ಚದಲ್ಲಿ 7 ತ್ರಿಚಕ್ರ ವಾಹನ ವಿತರಿಸಲಾಗಿದೆ ಎಂದರು.



ತಾಲೂಕು ಪಂಚಾಯಿತಿ ಆರೋಗ್ಯ ಅನುದಾನದಡಿ ಗ್ರಾಮೀಣ ಆರೋಗ್ಯ ಕೇಂದ್ರಗಳಿಗೆ ಅಗತ್ಯ ವೈದ್ಯಕೀಯ ಉಪಕರಣಗಳನ್ನು ಒದಗಿಸಲಾಗುತ್ತಿದೆ. ನಾಲ್ಕು ಸಿಬಿಸಿ ಯಂತ್ರ, ನಾಲ್ಕು ಇಸಿಜಿ ಯಂತ್ರ, 11 ಹಾಟ್ ಅಂಡ್ ಕೋಲ್ಡ್ ವಾಟರ್ ಪ್ಯೂರಿಫೈಯರ್‌ಗಳು ಹಾಗೂ ನಾಲ್ಕು ಎಲೆಕ್ಟ್ರಿಕ್ ಗೀಸರ್‌ಗಳನ್ನು ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿತರಿಸಲಾಗುತ್ತಿದೆ. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಸ್ಥಳೀಯ ಮಟ್ಟದಲ್ಲೇ ಉತ್ತಮ ಆರೋಗ್ಯ ಸೇವೆ ದೊರೆಯಲಿದೆ ಎಂದು ತಿಳಿಸಿದರು.

ದೇವಲಕೆರೆ, ಹಾಲೇಬೇಳೂರು ಕುಂಬಳೋಡು, ಹೆತ್ತೂರು, ಬಾಳುಪೇಟೆ, ಕಾಮನಹಳ್ಳಿ, ಚೆಂಗಡಹಳ್ಳಿ, ಕೂಡುರಸ್ತೆ ಸೇರಿ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಟ್ ಅಂಡ್ ಕೋಲ್ಡ್ ಪ್ಯೂರಿಫೈಯರ್, ಸಿಬಿಸಿ ಯಂತ್ರ, ಇಸಿಜಿ ಯಂತ್ರ ಹಾಗೂ ಗೀಸರ್‌ಗಳನ್ನು ಹಂಚಿಕೆ ಮಾಡಲಾಗಿದೆ ಎಂದು ವಿವರಿಸಿದರು.

ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಿರುವ ಹಿನ್ನೆಲೆಯಲ್ಲಿ ಗ್ರಾಮಗಳ ಸುರಕ್ಷತೆಗಾಗಿ ಸುಮಾರು 29 ಲಕ್ಷ ರೂ. ವೆಚ್ಚದಲ್ಲಿ 24 ಸೌರಶಕ್ತಿ ಆಧಾರಿತ ಹೈಮಾಸ್ಟ್ ದೀಪಗಳನ್ನು ವಿವಿಧ ಗ್ರಾಮಗಳಲ್ಲಿ ಅಳವಡಿಸಲಾಗುತ್ತಿದೆ. ಬಾಗೆ, ಹೆತ್ತೂರು, ಕುರುಬತ್ತೂರು, ಬಾಳ್ಳುಪೇಟೆ, ಉಚ್ಚಂಗಿ, ದೇವಲಕೆರೆ, ಐಗೂರು, ವನಗೂರು, ಕ್ಯಾನಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಈ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಸರ್ಕಾರದಿಂದ ದೊರೆಯುವ ಅನುದಾನವನ್ನು ಜನಪರವಾಗಿ ಸದ್ಬಳಕೆ ಮಾಡಿಕೊಂಡು ವಿಶೇಷ ಚೇತನರು, ಹಿರಿಯ ನಾಗರಿಕರು ಹಾಗೂ ಗ್ರಾಮೀಣ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಉದ್ದೇಶವಾಗಿದೆ ಎಂದು ತಿಳಿಸಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಸಿಡಿಪಿಒ ಇಂದಿರಾ, ಸಿಬ್ಬಂದಿ ವನರಾಜ್, ಬಿಜೆಪಿ ಮುಖಂಡರಾದ ಟಿ. ರಾಜ್ ಕುಮಾರ್, ಹೆತ್ತೂರು ಮಹೇಶ್, ಅಗ್ನಿ ಸೋಮಶೇಖರ್, ವಿನಯ್, ಪ್ರಗತಿ, ಸತ್ಯಜಿತ್ ಇತರರಿದ್ದರು.

# ಹದಗೆಟ್ಟ ರಸ್ತೆಯ ಗುಂಡಿ ಮುಚ್ಚಿದ ಗ್ರಾಮಸ್ಥರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು-ಬಿಕ್ಕೋಡು-ಸಕಲೇಶಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣ ಹದಗೆಟ್ಟ ಹಿನ್ನೆಲೆಯಲ್ಲಿ ಗ್ರಾಮಸ್ಥರೇ ಮಣ್ಣು ಹಾಕುವ ಮೂಲಕ ವಾಹನಗಳ ಸಂಚಾರಕ್ಕೆ ಅನೂಕುಲ ಮಾಡಿ ಕೊಟ್ಟಿದ್ದಾರೆ.

ಆಳೆತ್ತರದ ಗುಂಡಿಗಳು ನಿರ್ಮಾಣವಾದ್ದರಿಂದ ವಾಹನ ಸವಾರರು ನಿತ್ಯ ಸಂಕಷ್ಟ ಅನುಭವಿಸುತ್ತಿದ್ದರು. ಮೂರು ವರ್ಷಗಳಿಂದ ಸಮಸ್ಯೆ ಜೀವಂತವಾಗಿದ್ದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗಮನ ಹರಿಸಿರಲಿಲ್ಲ. ನಿರ್ಲಕ್ಷ್ಯಕ್ಕೆ ಬೇಸತ್ತ ಬಿಕ್ಕೋಡು ಹೋಬಳಿಯ ಚಿಕ್ಕ ಬಿಕ್ಕೋಡಿನ ಗ್ರಾಮಸ್ಥರೇ ಸ್ವಯಂ ಪ್ರೇರಿತರಾಗಿ ಕೈಮರದ ಬಳಿ ರಸ್ತೆಯ ಗುಂಡಿಗಳನ್ನು ತಾತ್ಕಾಲಿಕವಾಗಿ ಮಣ್ಣು ಹಾಕಿ ಮುಚ್ಚಿದ್ದಾರೆ.



ಚಿಕ್ಕ ಬಿಕ್ಕೋಡಿನ ಯುವಕ ಗಣೇಶ್ ಮಾತನಾಡಿ, ಬೇಲೂರಿನಿಂದ ಬೆಳಗೋಡು-ಅರೇಹಳ್ಳಿ ಮೂಲಕ ಸಕಲೇಶಪುರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯು ಗುಂಡಿಮಯವಾಗಿದೆ. ಈ ರಸ್ತೆಯಲ್ಲಿಯೇ ಸಾಗುವ ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ರಸ್ತೆಯ ದುಸ್ಥಿತಿ ಬಗ್ಗೆ ಗಮನ ನೀಡಲು ಸಾಧ್ಯವಾಗಿಲ್ಲ. ಹಾಗಾಗಿ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅನಿವಾರ್ಯವಾಗಿ ನಾವೇ ಕೈಲಾದಷ್ಟು ಗುಂಡಿಗಳಿಗೆ ಮಣ್ಣು ಹಾಕಿ ಮುಚ್ಚಿದ್ದೇವೆ ಎಂದರು.

# ಮಕ್ಕಳ ಹಕ್ಕುಗಳ ರಕ್ಷಣೆಗೆ ಆದ್ಯತೆ ನೀಡಬೇಕು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಣದ ಜೊತೆಗೆ ಕಾನೂನು ಅರಿವು ಕೂಡ ಮಹತ್ವದ್ದಾಗಿದ್ದು, ಮಕ್ಕಳ ಹಕ್ಕುಗಳ ರಕ್ಷಣೆಗೆ ಒತ್ತು ನೀಡಬೇಕಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ತಿಳಿಸಿದರು.

ನಗರದ ಎಂ.ಜಿ. ರಸ್ತೆಯ ಮಕ್ಕಳ ಕಲ್ಯಾಣ ಸಮಿತಿ ಬಾಲಕರ ಬಾಲ ಮಂದಿರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮಕ್ಕಳ ಹಕ್ಕುಗಳ ರಕ್ಷಣೆ, ಉಚಿತ ಕಾನೂನು ನೆರವು ಮತ್ತು ಶಿಕ್ಷಣದ ಮಹತ್ವದ ಕುರಿತು ಜಾಗೃತಿ ಮೂಡಿಸುವ ಉಚಿತ ಕಾನೂನು ಸಲಹಾ ಕೇಂದ್ರ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾನ ಹಕ್ಕುಗಳನ್ನು ಹೊಂದಿದ್ದು, ನ್ಯಾಯ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಗೌರವಿಸುವ ಮನೋಭಾವವನ್ನು ಬಾಲ್ಯದಿಂದಲೇ ಬೆಳೆಸಿಕೊಳ್ಳಬೇಕು. ತಪ್ಪುಗಳನ್ನು ಸಹಿಸುವ ಬದಲು ಅವುಗಳನ್ನು ಪ್ರಶ್ನಿಸುವ ಮತ್ತು ಖಂಡಿಸುವ ಗುಣ ಪ್ರತಿಯೊಬ್ಬ ನಾಗರಿಕನಲ್ಲಿ ಇರಬೇಕು. ಸಂವಿಧಾನವು ನೀಡಿರುವ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಸಹ ಪ್ರತಿಯೊಬ್ಬರೂ ಅರಿತು ಪಾಲಿಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು. ಬಾಲ ಮಂದಿರಗಳಲ್ಲಿ ಆಶ್ರಯ ಪಡೆದಿರುವ ಮಕ್ಕಳು ಶಿಕ್ಷಣ, ಆರೋಗ್ಯ ಮತ್ತು ರಕ್ಷಣೆಯಂತಹ ಮೂಲಭೂತ ಹಕ್ಕುಗಳಿಂದ ವಂಚಿತರಾಗಬಾರದು.

ಸರ್ಕಾರ ಅವರಿಗೆ ಉತ್ತಮ ಶಿಕ್ಷಣ ಹಾಗೂ ಅಗತ್ಯ ಸೌಲಭ್ಯ ಕಲ್ಪಿಸುತ್ತಿದ್ದು, ಪ್ರತಿಯೊಬ್ಬ ಮಗುವೂ ವಿದ್ಯಾವಂತರಾಗಿ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಬೇಕು. ಶಿಕ್ಷಣವೆಂದರೆ ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ. ಅದು ಉತ್ತಮ ವ್ಯಕ್ತಿತ್ವ, ನೈತಿಕತೆ ಮತ್ತು ಸಮಾಜದ ಬಗ್ಗೆ ಜವಾಬ್ದಾರಿಯುತ ಮನೋಭಾವ ಬೆಳೆಸುವ ಶಕ್ತಿಯಾಗಿದೆ ಎಂದು ಹೇಳಿದರು.

ಇತರರಿಗೆ ತೊಂದರೆ ಉಂಟುಮಾಡಿ ಬದುಕುವ ಬದಲು ಪ್ರಾಮಾಣಿಕ ದುಡಿಮೆಯ ಮೂಲಕ ಜೀವನ ಕಟ್ಟಿಕೊಳ್ಳುವ ಮನೋಭಾವವನ್ನು ಮಕ್ಕಳು ರೂಢಿಸಿಕೊಳ್ಳಬೇಕು. ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಕಾನೂನುಬದ್ಧ ಪರಿಹಾರ ತಿಳಿದುಕೊಳ್ಳುವುದು ಅಗತ್ಯವಾಗಿದ್ದು, ಅದಕ್ಕಾಗಿ ಈ ಉಚಿತ ಕಾನೂನು ಸಲಹಾ ಕೇಂದ್ರ ನೆರವಾಗಲಿದೆ ಎಂದು ಸಲಹೆ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಮಾತನಾಡಿ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ವಿವಿಧ ಯೋಜನೆಗಳ ಮೂಲಕ ಸಂಕಷ್ಟದಲ್ಲಿರುವ ಮಕ್ಕಳು, ಮಹಿಳೆಯರು ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತ ಕಾನೂನು ನೆರವು ನೀಡಲಾಗುತ್ತಿದೆ ಎಂದರು.

# ಗವೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ಪಕ್ಷಾತೀತವಾಗಿ ನಡೆದಿದ್ದರೂ ಅದನ್ನು ರಾಜಕೀಯ ಪಕ್ಷದ ಗೆಲುವೆಂದು ಬಣ್ಣಿಸುತ್ತಿರುವುದು ಖಂಡನೀಯ. ಸುಳ್ಳು ಸುದ್ದಿ ಮೂಲಕ ಸಂಘಕ್ಕೆ ಕೆಟ್ಟ ಹೆಸರು ತರಬೇಡಿ ಎಂದು ಗವೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಬಾಲಕೃಷ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಚುನಾವಣೆ ಯಾವುದೇ ರಾಜಕೀಯ ಪಕ್ಷದ ಚಿಹ್ನೆಯಡಿ ನಡೆದಿಲ್ಲ. ಸದಸ್ಯರು ಸ್ವತಂತ್ರ ಅಭಿಪ್ರಾಯದ ಮೇರೆಗೆ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಆದರೆ, ಕೆಲವರು ಗೆಲುವನ್ನು ಜೆಡಿಎಸ್ ಸಾಧನೆಯಂತೆ ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸುತ್ತಿದ್ದಾರೆ. ಚುನಾವಣೆ ಪ್ರಕ್ರಿಯೆ ಬಳಿಕ ರೂಢಿಯಂತೆ ವಿಜೇತರೆಲ್ಲರೂ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಭೇಟಿಯಾಗಿದ್ದರು. ಆಗ ಶಾಸಕರು ಎಲ್ಲರಿಗೂ ಸನ್ಮಾನಿಸಿದ್ದಾರೆ. ಅದೇ ಭಾವಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿರುವ ಕೆಲವರು ಆಯ್ಕೆ ಆಗಿರುವ ಎಲ್ಲರೂ ಜೆಡಿಎಸ್‌ನವರು ಎಂಬ ಸುದ್ದಿ ಹಬ್ಬಿಸುತ್ತಿದ್ದಾರೆ. ಪ್ರಾಥಮಿಕ ಸಹಕಾರ ಸಂಘವನ್ನು ರಾಜಕೀಯ ಪಕ್ಷಕ್ಕೆ ಸೀಮಿತಗೊಳಿಸುವುದು ಸರಿಯಲ್ಲ ಎಂದರು.




ಸಹಕಾರ ಸಂಘಗಳು ರಾಜಕೀಯಕ್ಕಿಂತ ಸದಸ್ಯರ ಹಿತಾಸಕ್ತಿ ಮತ್ತು ರೈತರ ಅಭಿವೃದ್ಧಿಗೆ ಆದ್ಯತೆ ನೀಡುವ ಸಂಸ್ಥೆಗಳಾಗಿವೆ.

ಆದ್ದರಿಂದ ಇಂತಹ ಸುಳ್ಳು ಹಾಗೂ ದಾರಿ ತಪ್ಪಿಸುವ ಪ್ರಚಾರಕ್ಕೆ ಸಂಘದ ಸದಸ್ಯರು ಮತ್ತು ಸಾರ್ವಜನಿಕರು ಮರುಳಾಗಬಾರದು. ಸಹಕಾರ ಸಂಘದ ಸ್ವಾಯತ್ತತೆ ಮತ್ತು ಪಕ್ಷಾತೀತ ಪರಂಪರೆಯನ್ನು ಎಲ್ಲರೂ ಗೌರವಿಸಬೇಕು ಎಂದರು.

ಸಂಘದ ಅಧ್ಯಕ್ಷ ಹರೀಶ್, ನಿರ್ದೇಶಕರಾದ, ಹೊನ್ನೇಗೌಡ, ಸೋಮಣ್ಣ, ಸುಬ್ಬೇಗೌಡ, ಜಿ.ಜಿ. ಪ್ರಕಾಶ್ ಹಾಗೂ ರಾಜಪ್ಪ ಉಪಸ್ಥಿತರಿದ್ದರು.

# ಬಡಾವಣೆಗಳಿಗೆ ಸೌಕರ್ಯ: ಹುಡಾ ಕಚೇರಿಯಲ್ಲಿ ಶಾಸಕರ ಸಭೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಾಸಕ ಹೆಚ್.ಪಿ.ಸ್ವರೂಪ್ ಅವರು ಹಾಸನ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ಕಚೇರಿಗೆ ಭೇಟಿ ನೀಡಿ ವಿವಿಧ ಬಡಾವಣೆಗಳಿಗೆ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿದರು. ಎಸ್.ಎಂ.ಕೃಷ್ಣ ಬಡಾವಣೆ, ಸಿದ್ಧಾರ್ಥ ನಗರ, ಬಸವೇಶ್ವರ ನಗರ ಸೇರಿ ವಿವಿಧ ಬಡಾವಣೆಗಳಲ್ಲಿ ಮೂಲಸೌಲಭ್ಯಗಳಿಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯುತ್ ಇಲ್ಲದೆ ಕತ್ತಲಲ್ಲೇ ದಿನ ಕಳೆಯುತ್ತಿರುವ ಎಸ್.ಎಂ.ಕೃಷ್ಣ ಬಡಾವಣೆ ಜನರು ಪ್ರತಿಭಟನೆ ನಡೆಸಿದ್ದರು. ಆಗ ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ಹೆಚ್.ಪಿ.ಸ್ವರೂಪ್ ಅವರು 15 ದಿನಗಳಲ್ಲಿ ಸಮಸ್ಯೆ ಸರಿಪಡಿಸುವ ಭರವಸೆ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಆಯುಕ್ತ ರಮೇಶ್, ಮಹಾನಗರ ಪಾಲಿಕೆ ಕೃಷ್ಣಮೂರ್ತಿ ಜೊತೆಗೆ ಸುದೀರ್ಘ ಮಾತುಕತೆ ನಡೆಸಿದರು.

ವಿದ್ಯುತ್ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ ಹೀಗೆ ವಿವಿಧ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರು. ಎಸ್.ಎಂ.ಕೆ. ಬಡಾವಣೆಯಲ್ಲಿ ವಿದ್ಯುತ್ ಪೂರೈಕೆಗೆ ಸಮಸ್ಯೆ ಗಂಭೀರವಾಗಿದೆ. ಟವರ್ ಅಳವಡಿಕೆ ಬಳಿಕ ವಿದ್ಯುತ್ ಸಂಪರ್ಕ ಕಲ್ಪಿಸಬಹುದು. ಮುಂದಿನ 15 ರಿಂದ 20 ದಿನಗಳಲ್ಲಿ ಸಬ್ ಸ್ಟೇಷನ್ ನಿರ್ಮಿಸಲಾಗುವುದು. ಸಿದ್ಧಾರ್ಥ ನಗರದಲ್ಲಿ ಯುಜಿಡಿ ಸಮಸ್ಯೆ ಬಗೆಹರಿಸಬೇಕೆಂದರೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುಮತಿ ಬೇಕೆಂದು ಅಧಿಕಾರಿಗಳು ತಿಳಿಸಿದಾಗ ದೂರವಾಣಿ ಮೂಲಕ ಅಧಿಕಾರಿಗಳೊಂದಿಗೆ ಮಾತನಾಡಿದ ಶಾಸಕರು ಪರಿಸ್ಥಿತಿಯ ಮನವರಿಕೆ ಮಾಡಿಕೊಟ್ಟರು. ಈ ವೇಳೆ ಬಡಾವಣೆ ನಿವಾಸಿಗಳು ಹಾಜರಿದ್ದರು.

# ಪ್ರೇಮ ವಿವಾಹಕ್ಕೆ ಸಹಕರಿಸಿದ ಆರೋಪ : ಮಾರಾಮಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು : ಪ್ರೇಮ ವಿವಾಹಕ್ಕೆ ನೆರವಾದ ಎಂಬ ಆರೋಪದ ಮೇಲೆ ಯುವಕನೊಬ್ಬನನ್ನು ಕಾರಿನಲ್ಲಿ ಅಪಹರಿಸಿ ಹಲ್ಲೆ ನಡೆಸಿದ ಘಟನೆ ಹಾಸನ ಜಿಲ್ಲೆಯ ಬೇಲೂರು ಪಟ್ಟಣದ ಜೆಪಿ ನಗರದಲ್ಲಿ ನಡೆದಿದೆ. ಘಟನೆ ವಿಕೋಪಕ್ಕೆ ತಿರುಗಿ ಹಲ್ಲೆಕೋರರನ್ನು ಸ್ಥಳೀಯರು ಮತ್ತು ಯುವಕನ ಸ್ನೇಹಿತರು ಅಟ್ಟಾಡಿಸಿ ಹೊಡೆದಿದ್ದಾರೆ. ಜಗಳ ಬಿಡಿಸಲು ಬಂದ ಪೊಲೀಸರ ಮೇಲೆಯೇ ಪುಂಡರು ಹಲ್ಲೆ ನಡೆಸಿದ್ದಾರೆ.



ಜುಲೈ 1ರಂದು ಬಂಟೇನಹಳ್ಳಿಯ ಸಾನಿಯಾ ಹಾಗೂ ಮುದಿಗೆರೆಯ ಆಸೀಫ್ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ಅದೇ ದಿನ ಸಾನಿಯಾ ಪೋಷಕರು ಪೊಲೀಸ್ ಠಾಣೆಯಲ್ಲಿ ದೂರು ಕೂಡ ದಾಖಲಿಸಿದ್ದರು. ಈ ಮದುವೆಗೆ ಫ್ರಿಡ್ಜ್ ರಿಪೇರಿ ಕೆಲಸ ಮಾಡುವ ರೋಷನ್ ಕಾರಣ ಎಂಬ ಆರೋಪವಿತ್ತು. ಇದರ ಜೊತೆಗೆ ಜೆಪಿ ನಗರದಲ್ಲಿ ಕೋಳಿ ಅಂಗಡಿ ನಡೆಸುತ್ತಿರುವ ಶಾಹೀಂ ಹಾಗೂ ರೋಷನ್ ನಡುವೆ ಹಳೇ ದ್ವೇಷವೂ ಇತ್ತು. ಇದೇ ದ್ವೇಷದ ಹಿನ್ನೆಲೆಯಲ್ಲಿ, ರೋಷನ್‌ನನ್ನು ಮಾತನಾಡಬೇಕೆಂದು ಶಾಹೀಂ ಹಾಗೂ ಶಿವಮೊಗ್ಗ, ಮಂಗಳೂರು ಮೂಲದ ಸುಮಾರು 10 ಮಂದಿ ಯುವಕರು ಇನ್ನೋವಾ ಕಾರಿನಲ್ಲಿ ಕರೆದೊಯ್ದಿದ್ದಾರೆ. ನಾಗೇನಹಳ್ಳಿ ಗ್ರಾಮದ ಬಳಿ ಕರೆದೊಯ್ದು ರೋಷನ್‌ಗೆ ಮನಬಂದಂತೆ ಥಳಿಸಿದ್ದಾರೆ.

ರೋಷನ್‌ನನ್ನು ಕಾರಿನಲ್ಲಿ ಕರೆದೊಯ್ಯುತ್ತಿರುವುದನ್ನು ಆತನ ಸ್ನೇಹಿತರು ಗಮನಿಸಿದ್ದರು.

ತಕ್ಷಣ ಆತನನ್ನು ಹುಡುಕಿಕೊಂಡು ಹತ್ತಾರು ಮಂದಿ ಕಾರಿನಲ್ಲಿ ಹೊರಟಿದ್ದರು. ರೋಷನ್ ಮೇಲೆ ಹಲ್ಲೆ ನಡೆಸಿ ವಾಪಸ್ ಆತನನ್ನು ಅದೇ ಸ್ಥಳಕ್ಕೆ ಬಿಡಲು ಇನ್ನೋವಾ ಕಾರು ಜೆಪಿ ನಗರಕ್ಕೆ ಬಂದಾಗ ರೊಚ್ಚಿಗೆದ್ದ ರೋಷನ್ ಕಡೆಯವರು ಕಾರನ್ನು ಅಡ್ಡಗಟ್ಟಿದ್ದಾರೆ.

# ಮೀಟ್ ಮಿಸ್ಟರ್ ಗಜ್‌ರಾಜ್-1

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-22**

ದೇವಪ್ಪ ಹೇಳಿದ ದಾರಿಯಲ್ಲೇ ಸ್ವಲ್ಪ ದೂರ ನಡೆದ ನನಗೆ ದಟ್ಟ ಅರಣ್ಯವೊಂದು ಎದುರಾಯ್ತು. ಆಕಾಶದೆತ್ತರಕ್ಕೆ ತಲೆಎತ್ತಿದ ಮರಗಳು ಇನ್ನೂ ಬೆಳಗಿನ ಇಬ್ಬನಿಯ ಹನಿಗಳನ್ನು ಅಷ್ಟೆತ್ತರದಿಂದ ಥಟ್ ಥಟ್ ಎಂದು ಬೀಳಿಸುತ್ತಿದ್ದವು. ಚಿಕ್ಕ ಕಾಲ್ದಾರಿಯೊಂದು ಹಳ್ಳದವರೆಗೆ ಕಾಣುತ್ತಿತ್ತು. ಅದರಲ್ಲೇ ಮುಂದುವರೆದಂತೆ ನನಗೆ ದೊಡ್ಡಹಳ್ಳದ ದಡದಲ್ಲಿದ್ದ ಬೃಹತ್ ಬಂಡೆಗಳು ಎದುರಾದವು. ಹಳ್ಳದ ನೀರಿನಲ್ಲಿ ಮುಖ ತೊಳೆದುಕೊಂಡು ಬಂಡೆಗಳೆಡೆಯಲ್ಲಿ ದಾರಿಮಾಡಿಕೊಂಡು ವಿಸ್ತಾರವಾದ ಕಲ್ಲೊಂದನ್ನು ಏರಿ ತಲೆ ಎತ್ತಿದಾಗ ಕಂಡಿದ್ದು ಕಲ್ಲಿನ ಬೃಹದಾಕಾರದ ಕಂಬಗಳ ಸೇತುವೆಯ ಮೇಲೆ ಗಾಂಭೀರ್ಯತೆಯಿಂದ ಪವಡಿಸಿದ್ದ ರೈಲು ಹಳಿಗಳು.

ನಮ್ಮ ಚಾರಣದ ಎರಡನೆಯ ದಿನ ಅದು. ನಾವು ತಂಗಬೇಕಿದ್ದ ಎಡಕುಮರಿ ರೈಲು ನಿಲ್ದಾಣದ ಪಾಳುಬಿದ್ದ ಕಟ್ಟಡವನ್ನು ಸಂಜೆ ಕತ್ತಲಾಗುತ್ತಾ ಬಂದರೂ, ನಮಗೆ ತಲುಪಲಾಗಲಿಲ್ಲ. ಆ ದಿನ ಮಧ್ಯಾಹ್ನ ನಮ್ಮ ತಂಡದಲ್ಲಿದ್ದ ಮಧ್ಯ ವಯಸ್ಕರೊಬ್ಬರಿಗೆ ಹಿಮ್ಮಡಿ ನೋವು ಕಾಣಿಸಿಕೊಂಡಿತ್ತು. ಯಾರನ್ನೂ ಹಿಂದೆ ಬಿಟ್ಟು ಇತರರು ಮುಂದೆ ಹೋಗಲು ಸಾಧ್ಯವಿರಲಿಲ್ಲ. ಹಾದಿಯಲ್ಲಿನ ರೈಲ್ವೇ ಕಂಬಿಗಳು ಮುಚ್ಚಿಹೋಗುವಂತೆ ಕಾಡು ಸಸ್ಯಗಳು, ಸಣ್ಣಗಾತ್ರದ ಮರಗಳು ಬೆಳೆದು ನಿಂತಿದ್ದವು. ಹಲವೆಡೆ ಬಳ್ಳಿಗಳು ಇಡೀ ರೈಲು ಸೇತುವೆಯನ್ನೇ ಆವರಿಸಿಕೊಂಡಿದ್ದವು. ಕಂಬಿಗಳ ಸಂದಿಯಲ್ಲಿ ಈವರೆಗೂ ಕಂಡಿರದಂಥಾ ಹಾವುಗಳು ಸುರುಳಿ ಸುತ್ತಿಕೊಂಡೋ, ಸಳಸಳನೆ ಹರಿದಾಡಿಕೊಂಡೋ ಗಾಬರಿ ಹುಟ್ಟಿಸುತ್ತಿದ್ದವು. ಪ್ರತೀ ಹೆಜ್ಜೆಯನ್ನೂ ಅತೀವ ಎಚ್ಚರಿಕೆ ಹಾಗೂ ಆತಂಕದಿಂದ ಇಡಬೇಕಿತ್ತು. ರೈಲುಮಾರ್ಗದ ಮೇಲೆಯೇ ನಡೆಯಬೇಕಿದ್ದರಿಂದ ಒಂದು ನಿರ್ದಿಷ್ಟ ಅಂತರದ ನಡಿಗೆಯನ್ನೇ ಪಾಲಿಸಬೇಕಿತ್ತು. ರೈಲು ಹಳಿಯಡಿಯ ಕುಂಬಾಗಿ ಲಡ್ಡಾಗಿದ್ದ ಮರದ ಪಟ್ಟಿಗಳು, ಆ ಮರದ ಪಟ್ಟಿಯ ಸಂದಿಯಲ್ಲಿದ್ದ ಚೇಳು-ಹಾವುಗಳು ನಗರದಿಂದ ಚಾರಣ ಬಂದವರಿರಲಿ, ಹಳ್ಳಿಗಾಡಿನ ನನ್ನಂಥವನನ್ನೂ ದಿಗಿಲಿಗೆ ನೂಕಿದ್ದವು. ನಮ್ಮ ನಡಿಗೆಯ ಸದ್ದಿಗೆ ಆ ವಿಷಜಂತುಗಳು ದೂರ ಹೋಗಲಿ ಎಂದು ಹೆಜ್ಜೆಯನ್ನು ಎತ್ತಿ ಎತ್ತಿ ದಢ್‌ದಢ್ ಎಂದು ನೆಲಕ್ಕೆ ಬಡಿಯುತ್ತಿದ್ದೆವು. ಮಾರುದ್ದದ ಕೋಲಿನಿಂದ ರೈಲ್ವೇ ಕಂಬಿಯನ್ನು ಕುಟ್ಟಿ ಸದ್ದು ಮಾಡುತ್ತಾ ಸಾಗುತಿದ್ದೆವು. ಅಲ್ಲಲ್ಲಿ ಸಿಗುತ್ತಿದ್ದ ಸುರಂಗಗಳು ನಮ್ಮ ಆತಂಕ-ಭಯವನ್ನು ಇನ್ನೂ ಹೆಚ್ಚು ಮಾಡುತಿದ್ದವು. ನೂರಾರು ಮೀಟರ್ ಉದ್ದವಿದ್ದ ಸುರಂಗಗಳು ಕತ್ತಲೆಯ ಕೂಪಗಳಾಗಿದ್ದವಲ್ಲದೇ, ಸಾವಿರಾರು ಬಾವಲಿಗಳ ಆಶ್ರಯ ತಾಣವೂ ಆಗಿದ್ದವು. ಬೆಟ್ಟಗುಡ್ಡಗಳ ನೂರಾರು ಅಡಿ ತಳದಲ್ಲಿ ಭೂಗರ್ಭದೊಳಗೆ ಹಾದು ಹೋಗುವ ಈ ಸುರಂಗಗಳೊಳಗೆ ನಡೆಯುತ್ತಾ ಒಮ್ಮೆ ನುಸುಳಿದರೆ ಹೊರಬರಲು ಹತ್ತು ನಿಮಿಷದಿಂದ ಇಪ್ಪತ್ತೈದು ನಿಮಿಷಗಳೇ ಬೇಕಿತ್ತು. ಬಾವಲಿಗಳ ಉಚ್ಚಿಷ್ಠದ ಮುಗ್ಗಲು ವಾಸನೆ, ಸುರಂಗದ ನೆತ್ತಿಯ ಮೇಲಿಂದ ಥಟ್ ಥಟ್ಟೆಂದು ಜಿನುಗುವ ನೀರ ಹನಿಗಳು, ಸುರಂಗದ ಒಳಬದಿಯ ಎರಡೂ ಮಗ್ಗುಲಲ್ಲಿನ ಚರಂಡಿಯಲ್ಲಿ ಹರಿಯುವ ತೆಳುವಾದ ನೀರ ಹರಿವು, ಕಂಬಿಗಳ ಸಂದಿಯಲ್ಲಿ ಸುತ್ತಿಕೊಂಡು ಮಲಗಿರಬಹುದಾದ ಉರಗಗಳು, ಇನ್ನೇನು ಮುಖಕ್ಕೆ ಬಡಿದೇ ಬಿಡುತ್ತವೆ ಎಂದು ಗಾಬರಿ ಹುಟ್ಟಿಸುವ ಬಾವಲಿಗಳು, ದೂರದಲ್ಲೆಲ್ಲೋ ಸುರಂಗದ ಕೊನೆ ಇದೆ ಎಂಬುದಕ್ಕೆ ಭರವಸೆಯಾಗಿ ಕಾಣುವ ಕ್ಷೀಣವಾದ ಬೆಳಕು. ನಮ್ಮ ದನಿಯೇ ನಮಗೆ



ಅಪರಿಚಿತವಾಗಿಬಿಡುವ ನೀರವ ಕತ್ತಲು, ಸುರಂಗ ಒಳ ಹೊಕ್ಕೊಡನೆ ಸುರಂಗದ ಎರಡೂ ಬದಿಯ ಬೆಟ್ಟ ಜರುಗಿದರೆ ಶಾಶ್ವತವಾಗಿ ಜೀವಂತಸಮಾಧಿಯಾಗುವ ಭೀಬತ್ಸ ಕಲ್ಪನೆಯ ಭಯವಿಹ್ವಲತೆ.

ಅಂತೂ ಇಂತೂ ಅಂದು ತಂಗಲು ನಿಗದಿಯಾಗಿದ್ದ ಪಾಳುಬಿದ್ದ ರೈಲ್ವೇ ಸ್ಟೇಷನ್ನನ್ನು ತಲುಪಿದಾಗ ಕತ್ತಲು ಕವಿದು, ಅತ್ತ ಸಂಜೆಯೂ ಅಲ್ಲದ ಇತ್ತ ರಾತ್ರಿಯೂ ಅಲ್ಲದ ಏಳೂಕಾಲು ಗಂಟೆಯಾಗಿತ್ತು. ನಮ್ಮ ಚಾರಣ ನಿರ್ದೇಶಕರ ಲೆಕ್ಕಾಚಾರ ತಪ್ಪಿಹೋಗಿ ಚಾರಣಿಗರೆಲ್ಲಾ ಒಂದು ಸಾರಿ ತಂಗುವ ಸ್ಥಳ ತಲುಪಿದರೆ ಸಾಕೆಂದು ಹಲ್ಲುಮುಡಿ ಕಚ್ಚಿ ಆ ಮಬ್ಬುಗತ್ತಲಲ್ಲೇ ಅಸಡಾ ಬಸಡಾ ಹೆಜ್ಜೆ ಹಾಕುತ್ತಾ ತತ್ತರಿಸುತ್ತ ನಡೆದು ಹೈರಾಣಾಗಿದ್ದೆವು. ವರ್ಷಗಳ ಕಾಲ ಯಾರೂ ಓಡಾಡದೇ, ನಿರ್ಮಾನುಷವಾಗಿದ್ದ ರೈಲು ನಿಲ್ದಾಣ ಭೂತಬಂಗಲೆಯನ್ನು ನೆನಪಿಸುತಿತ್ತು. ನೆಲದ ಸಿಮೆಂಟ್ ಕಿತ್ತು ಹೋದಲ್ಲಿ ಆಳೆತ್ತರದ ಕಾಡುಗಿಡಗಳು, ಕುಂಭದ್ರೋಣ ಮಳೆಯಾಗುವ ಪ್ರದೇಶವಾದ್ದರಿಂದ ಗೋಡೆಗಳ ಮೇಲೂ ರತ್ನಗಂಬಳಿಯನ್ನು ನೆನಪಿಸುವಷ್ಟು ದಪ್ಪದ ಹಾವಸೆಯ ಹೊದಿಕೆ. ಆ ಹಸಿರು ಹೊದಿಕೆಯ ಮೇಲೆ ನಯವಾಗಿ ತೆವಳುತ್ತಾ ಹರಿದಾಡುವ ಚಿತ್ರವಿಚಿತ್ರ ಎಳನಾಗರ ಮಾದರಿಯ ಹುಳುಗಳು, ನಿಲ್ದಾಣದ ನೆಲಕ್ಕಂಟಿಕೊಂಡಿದ್ದ ಕೌದಿಯಷ್ಟು ದಪ್ಪದ ಪರ್ಣಹಾಸು. ಅಲ್ಲೆಲ್ಲೋ ಮೂಲೆಯಲ್ಲಿನ ಪ್ರಯಾಣಿಕರು ವಿಶ್ರಮಿಸಲು ಹಾಕಿದ್ದ ತುಕ್ಕು ಹಿಡಿದು ಸೊರಗಿದ್ದ ಕಬ್ಬಿಣದ ಒರಗು ಬೆಂಚಿನ ಕಾಲ ಬುಡದಲ್ಲಿ ಎಂದೋ ಕಳಚಿ ಹೋಗಿದ್ದ ಹಾವಿನ ಪೊರೆ..... ಹೀಗೆ ವಿಶ್ರಮಿಸಿ, ನಿದ್ರೆಮಾಡಿ, ರಾತ್ರಿ ಕಳೆಯಲು ಯಾವುದೇ ರೀತಿಯಲ್ಲೂ ಪ್ರಶಸ್ತವಲ್ಲದ ಜಾಗದಲ್ಲಿ ಕ್ಯಾಂಪ್ ಮಾಡುವುದೆಂದು ತಂಡದ ನಾಯಕ ಆನಂದ್ ಹೇಳಿದಾಗ ಎಲ್ಲರಿಗೂ ದಿಗಿಲಾಯ್ತು. ಸುತ್ತಲೆಲ್ಲಿ ನೋಡಿದರೂ ಅದಕ್ಕಿಂತ ಸುರಕ್ಷಿತ ಪ್ರದೇಶ ಕಾಣದ್ದರಿಂದ ಹಾಗೂ ಬೇರೊಂದು ಜಾಗ ಹುಡುಕಲು ಯಾರಿಗೂ ತಾಕತ್ತೂ ಉಳಿದಿರದಿದ್ದುದರಿಂದ ಎಲ್ಲರೂ ಗಪ್ ಚುಪ್ಪಾದೆವು. (ಮುಂದುವರಿಯುವುದು)

## ಇತಿಹಾಸದಲ್ಲಿ ಈ ದಿನ

### ಜುಲೈ-16

1661: ಯುರೋಪಿನ ಮೊದಲ ಬ್ಯಾಂಕ್‌ಗಳಲ್ಲಿ ಒಂದಾದ ಸ್ಟಾಕ್ ಹೋಮ್ಸ್ ಬ್ಯಾಂಕೊ (ಸ್ವೀಡನ್) ಯುರೋಪಿನಲ್ಲಿ ಮೊದಲ ಬಾರಿಗೆ ಕಾಗದದ ನೋಟುಗಳನ್ನು ಬಿಡುಗಡೆ ಮಾಡಿತು.

1790: ಅಮೆರಿಕದ ರಾಜಧಾನಿಯಾಗಿ ವಾಷಿಂಗ್ಟನ್ ಡಿ.ಸಿ. ನಗರವನ್ನು ಸ್ಥಾಪಿಸಲು ಅಮೆರಿಕ ಕಾಂಗ್ರೆಸ್ ಅನುಮೋದನೆ ನೀಡಿತು.

1945: ಅಮೆರಿಕವು ಟ್ರಿನಿಟಿ ಹೆಸರಿನ ಮೊದಲ ಅಣುಬಾಂಬ್ ಪರೀಕ್ಷೆಯನ್ನು ನ್ಯೂ ಮೆಕ್ಸಿಕೊದಲ್ಲಿ ಯಶಸ್ವಿಯಾಗಿ ನಡೆಸಿತು.

1969: ಮಾನವನನ್ನು ಚಂದ್ರನತ್ತ ಕೊಂಡೊಯ್ಯುವ ಐತಿಹಾಸಿಕ ಅಪೊಲೊ11 ಬಾಹ್ಯಾಕಾಶ ನೌಕೆ ಉಡಾವಣೆಗೊಂಡಿತು.

**ಜನನ**

1872: ನಾರ್ವೆಯ ಧ್ರುವ ಸಂಶೋಧಕ ರೋಆಲ್ಡ್ ಅಮುಂಡ್ಸೆನ್

1909: ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ಸಮಾಜ ಸೇವಕಿ ಅರುಣಾ ಆಸಫ್ ಅಲಿ

1968: ಭಾರತೀಯ ನಟ ದಿಲೀಪ್ ಜೋಶಿ

**ನಿಧನ**

1916: ರಷ್ಯಾದ ಜೀವಶಾಸ್ತ್ರಜ್ಞ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಇಲ್ಯಾ ಮೆಚ್ನಿಕೊಫ್

1981: ಅಮೆರಿಕದ ಗಾಯಕ ಹಾಗೂ ನಟ ಹ್ಯಾರಿ ಚಾಪಿನ್ ರಸ್ತೆ ಅಪಘಾತದಲ್ಲಿ ನಿಧನರಾದರು

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248